# 25. ಸ. ಕಿ. ಪ್ರಾ. ಶಾಲೆ ಬಾವಿಕೈ. ಹೊಸನಗರ. ತಾ॥

"ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಒಂದಲ್ಲಾ ಒಂದು ದಿನ ಫಲ ಕೊಡುತ್ತದೆ" ಎಂಬಂತೆ ಮಕ್ಕಳಲ್ಲಿ ಜ್ಞಾನ ದೀವಿಗೆಯನ್ನು ಬೆಳಗಲು ಪಣ ತೊಟ್ಟಿರುವ ಪುಟ್ಟ ಶಾಲೆ L.P.S ಬಾವಿಕೈ. ಹೊಸನಗರ ತಾಲೂಕು ಕೇಂದ್ರದಿಂದ 9 ಇಟ ದೂರದಲ್ಲಿರುವ ಶರಾವತಿ ನದಿಯ ದಡದಲ್ಲಿ ಮಲೆನಾಡ ಮಡಿಲಲ್ಲಿ ಹಸಿರಿನ ಸಿರಿಯ ಕಾನನದ ನಡುವೆ "ಸರ್ಕಾರಿ ಶಾಲೆಗೆ ಜೈ, ಈ ನಮ್ಮ ಬಾವಿಕೈ ಎಲ್ಲದಕ್ಕೂ ಸೈ" ಎಂಬಂತೆ "ಹಸಿರಾಗಿರಲಿ ನಮ್ಮ ಶಾಲೆ ಉಸಿರಾಗಲಿ ಅಕ್ಷರ ಮಾಲೆ" ಎಂಬ ದ್ಯೇಯವಾಕ್ಯ ಮುಕುಟದಲ್ಲಿ ಧರಿಸಿಕೊಂಡು ಹಸಿರು ಶಾಲೆಯಾಗಿ ಹೊರ ಹೊಮ್ಮಿದೆ.

ಮನಸ್ಸಿದ್ದಲ್ಲಿ ಮಾರ್ಗ ಎಂಬಂತೆ ಶಾಲೆಯು 1999 ರಲ್ಲಿ ಸ್ಥಾಪನೆಯಾಗಿದ್ದು ಶಾಲಾ ವಾತಾವರಣ ಆಕರ್ಷಣೆಗೊಳಿಸಲು ಶಾಲೆಗೆ ಹೊಸದಾಗಿ 2016–17 ನೇ ಸಾಲಿನಲ್ಲಿ ಇಬ್ಬರು ಶಿಕ್ಷಕರು ಹೊಸದಾಗಿ ನೇಮಕಗೊಂಡು ಪ್ರಯತ್ನ ನಡೆಸುತ್ತಿರುವಾಗ ಊರಿನ ಗ್ರಾಮಸ್ಥರು ನಮ್ಮ ಉತ್ಸಾಹಕ್ಕೆ ತಣ್ಣೀರೆರಚಿದರು. ಶಾಲಾ ಮುಂಭಾಗದಲ್ಲಿ ಒಂದು ದಿಬ್ಬದಲ್ಲಿ ವೇದಿಕೆ ಮಾಡಿಕೊಂಡು ಗಣೇಶೋತ್ಸವದಲ್ಲಿ ಕಾರ್ಯಕ್ರಮ ನಡೆಸುವುದಕ್ಕೆ ಅಡಚಣೆಯಾಗುತ್ತದೆಂದು ಒಂದು ವರ್ಷ ಏನೇ ಅಭಿವೃದ್ಧಿಗೆ, ಉದ್ಯಾನವನ ನಿರ್ಮಾಣಕ್ಕೆ ಅವಕಾಶ ನೀಡದಿದ್ದಾಗ ಶಿಕ್ಷಕರ ಉತ್ಸಾಹದ ಚಿಲುಮೆಗೆ ತಡೆಯಾಯಿತು.

ಛಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬಂತೆ ಶಿಕ್ಷಕರು ತಾವೇ ಸ್ವತಃ ಗುದ್ದಲಿ ಹಿಡಿದು ಉದ್ಯಾನವನ ನಿರ್ಮಾಣ ಕಾಮಗಾರಿಕೆ ಚಾಲನೆ ಕೊಟ್ಟು ಗ್ರಾಮಸ್ಥರ ಮನವೊಲಿಸಿ ಗ್ರಾ॥ ಪಂಚಾಯಿತಿ, ತೋಟಗಾರಿಕಾ ಇಲಾಖಾ ನೆರವು ಪಡೆದು ಗ್ರಾಮಸ್ಥರನ್ನು ವಿಶ್ವಾಸಕ್ಕೆ ಪಡೆದು ಇಂದು ಸುಂದರ ಉದ್ಯಾನವನ ಶಾಲಾ ಮುಂಭಾಗದಲ್ಲಿ ನಿರ್ಮಾಣವಾಗಿ ಶಿಕ್ಷಕರಿಬ್ಬರೂ ಆ ಊರಿನ 2 ಕಣ್ಣುಗಳಾಗಿ ಬೂದಿ ಕೇಂದ್ರವಾಗಿದ್ದ ಶಾಲೆ ಇಂದು ಸುಂದರವಾಗಿ ಕಂಗೊಳಿಸುತ್ತಿದೆ. 2017–18ನೇ ಸಾಲಿನ ಪರಿಸರಮಿತ್ರ ಶಾಲಾ ಕಾರ್ಯಕ್ರಮದಲ್ಲಿ ಹಸಿರು ಶಾಲೆ, 2018–19 ನೇ ಸಾಲಿನಲ್ಲಿ ಹಸಿರು ಶಾಲೆ ಹಾಗೂ ಧನ್ವಂತರಿ ಶಾಲೆಯಾಗಿ ಹೆಮ್ಮೆಯ ಸಾಧನೆ ಮಾಡಿದೆ.

"ಸ್ವಚ್ಛ ಶಾಲೆ ಸ್ವಚ್ಛ ಗ್ರಾಮ" ವಿಶೇಷ ಪ್ರಶಸ್ತಿ ದಶಮಾನೋತ್ಸವ ವಿಶೇಷ ಪ್ರಶಸ್ತಿ ಪರಿಸರ ಅಧ್ಯಯನ ಕೇಂದ್ರದಿಂದ 25,000/– ರೂ ಪಡೆದ ಜಿಲ್ಲೆಯ ಏಕೈಕ ಶಾಲೆ ಈ ನಮ್ಮ ಬಾವಿಕೈ ಶಾಲೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ.

## ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು

ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ನಲಿಕಲಿ ಅನುಷ್ಠಾನದ ಪ್ರಗತಿಯ ಕುರಿತಾದ ಹೊಸನಗರ ತಾಲ್ಲೂಕು ಮಟ್ಟದ ಕ್ಷೇತ್ರ ಸಂಪನ್ಮೂಲ ಘಟಕದ ಸರ್ಕಾರೀ ಸಭೆಯು ಹೊಸನಗರ ತಾಲ್ಲೂಕು ಬಾವಿಕೈ ಗ್ರಾಮದಲ್ಲಿ ನಡೆಯಿತು.

ಒಂದಲ್ಲಾ ಒಂದು ಸರ್ಕಾರಿ ಸಭೆಗಳು ನಡೆಯುತ್ತಲೇ ಇರುತ್ತವೆ. ಇದರಲ್ಲೇನು ವಿಶೇಷವೆಂದು ಯೋಚಿಸುತ್ತಿರಬಹುದು. ಆದರೆ ಸರ್ಕಾರಿ ಸಭೆಯನ್ನು ತಮ್ಮ ಊರಿನಲ್ಲಿ ನಡೆಸಲು ಅಧಿಕಾರಿಗಳನ್ನು ಆಹ್ವಾನಿಸಿ, ಆ ದಿನ ಗ್ರಾಮಸ್ಥರು ಅಧಿಕಾರಿಗಳಿಗೆ ಅಗತ್ಯ ತಿಂಡಿ, ಟೀ ವ್ಯವಸ್ಥೆ ಮಾಡುತ್ತಾರೆ. ಊರಿನ ಮಹಿಳೆಯರು. ಇಂತಹಾ ಅಪರೂಪದ ಕಾರ್ಯಕ್ರಮ ನಡೆಸಿಕೊಡಲು ನಾಯಕತ್ವ ವಹಿಸಿಕೊಳ್ಳುವುದು ಬಾವಿಕೈ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ರಾಮು.ಎಚ್, ಮತ್ತು ನಾಗರಾಜ.ವಿ.ಡಿ ಅವರು.

- **ಸಭೆ :–** ಗ್ರಾಮಸ್ಥರು ಊರಿನ ನಡು ತೋಪಿನ ಜಾಗದಲ್ಲಿ ಮರದ ನೆರಳಲ್ಲಿ ಸಭೆ ನಡೆಸಲು ಆಸನ ವ್ಯವಸ್ಥೆ ಮಾಡಲಾಗುವುದು. ಆ ದಿನ ಶಾಲೆಯ ಮುಂದೆ ಮಾವಿನ ತೋರಣದಿಂದ ಅಲಂಕಾರ ಮಾಡುತ್ತಾರೆ. ಹಿಂದಿನ ದಿನವೇ ದಾರಿಯನ್ನು ಸೆಗಣಿಯಿಂದ ಸಾರಿಸಿ ರಂಗೋಲಿ ಹಾಕಿ ಅಲಂಕರಿಸಿ ಶಾಲಾ ಮಕ್ಕಳು ಸಭೆಗೆ ಹಾಜರಾದ ಅಧಿಕಾರಿಗಳಿಗೆ ಸಿಹಿ ನೀಡಿ ಸ್ವಾಗತಿಸುವರು.
- **ಶಾಲೆಯಲ್ಲಿ ಶಿಕ್ಷಕರ ಕಾರ್ಯತತ್ಪರತೆ :–** ಈಗಾಗಲೇ ತಿಳಿಸಿದಂತೆ ಇಬ್ಬರೂ ಶಿಕ್ಷಕರಾದ ಶ್ರೀ ರಾಮು.ಎಚ್ ಮತ್ತು ನಾಗರಾಜು. ವಿ.ಡಿ ಇವರು ಕಳೆದ ಎರಡು ವರ್ಷಗಳಿಂದ ರಜೆಯನ್ನು ಪಡೆದಿರುವುದಿಲ್ಲ. ಬೆಳಗ್ಗೆ

9.00 ಕ್ಕೆ ಹಾಜರಾಗುವ ಇವರು ಸಂಜೆ ಏಳರ ತನಕ ಶಾಲೆಯಲ್ಲಿರುತ್ತಾರೆ. ಮಕ್ಕಳ ತರಗತಿ 4.30ಕ್ಕೆ ಮುಗಿದ ನಂತರ ಇಬ್ಬರೂ ಶಿಕ್ಷಕರು ತಮ್ಮ ಬಟ್ಟೆ ಬದಲಾಯಿಸಿ ಗುದ್ದಲಿ, ಹಾರೆ, ಪಿಕಾಸಿ ಹಿಡಿದು ಮೈತುಂಬಾ ಕೆಸರು ಬಳಿದುಕೊಂಡು ಶಾಲಾವರಣದಲ್ಲಿ ಗಿಡ ನೆಡುವುದು, ಗುಂಡಿ ತೋಡುವುದನ್ನು ತಾವು ಮಾಡಿಕೊಳ್ಳುತ್ತಾರೆ. ಒಂದು ಕಾಲದಲ್ಲಿ ಊರಿನ ಜನ ಗಣಪತಿ ಹಬ್ಬದ ದಿನ ಕುಣಿಯಲು ವೇದಿಕೆಯಂತೆ ಇರುವ ದಿಬ್ಬ ತೆಗೆಯಬೇಡಿ, ಆವರಣದಲ್ಲಿ ಕೈ ತೋಟ ಮಾಡಬೇಡಿ ಎಂದು ವಿರೋಧಿಸಿದ್ದರು. ಇಂದು ಇವರ ಕೆಲಸಗಳನ್ನು ನೋಡಿ ತಾವೂ ಕೈ ಜೋಡಿಸುತ್ತಿದ್ದಾರೆ.

- **ಶಾಲಾ ಧ್ಯೇಯ ವಾಕ್ಯ** :- 18 ಮಕ್ಕಳಿರುವ, ಇಬ್ಬರು ಶಿಕ್ಷಕರಿರುವ ಪುಟ್ಟ ಶಾಲೆ ತನ್ನದೇ ಧ್ಯೇಯವಾಕ್ಯ ಹೊಂದಿದೆ. **'ಹಸಿರಾಗಲಿ ನಮ್ಮ ಶಾಲೆ, ಉಸಿರಾಗಲಿ ಅಕ್ಷರ ಮಾಲೆ'** ಎಂಬುದು ವಿಶನ್ ಸ್ಟೇಟ್ ಮೆಂಟ್ ಅಥವ ಧ್ಯೇಯ ವಾಕ್ಯ. ಅಂತೆಯೇ ಶಾಲೆ ಹಸಿರಿಂದ ಕೂಡಿದೆ. ಉತ್ತಮ ಕೈ ತೋಟವಿದೆ. ಕಲಿಕೆಯೂ ಉತ್ತಮ. ಚಿಣ್ಣರು ಇಂಗ್ಲೀಷ್ ವಾಕ್ಯಗಳಲ್ಲಿ ಕಾರ್ಯಕ್ರಮ ನಿರೂಪಣೆ ಮಾಡುತ್ತಾರೆ. ತಕ್ಕಂತೆ ಶಿಕ್ಷಕರೂ ಹಸಿರು ಬಣ್ಣದ ಅಂಗಿಯನ್ನು ಯೂನಿಫಾರ್ಮ್ ಆಗಿ ತೊಡುತ್ತಾರೆ. ಇಲ್ಲಿರುವ ಅಂಗನವಾಡಿ ಕಾರ್ಯಕರ್ತೆಯೂ ಹಸಿರು ಸೀರೆಯುಡುತ್ತಾರೆ. ಮೂವರೂ ಸೇರಿ ಮಕ್ಕಳಿಗೆ ಕಲಿಸುತ್ತಾರೆ. ತೂಗುಯ್ಯಾಲೆಯ ತೊಟ್ಟಿಲನ್ನು ನಿರ್ಮಿಸಿ ಜಪಾನೀ ಮಾದರಿಯಲ್ಲಿ ತರಕಾರಿ ಸೊಪ್ಪನ್ನು ಬೆಳೆಸಿದ್ದಾರೆ. ಹಸುವಿನ ಆಕೃತಿಯನ್ನು ಮಾಡಿ ಹಸು ಸಾಕಾಣಿಕೆಯ ಲಾಭಗಳ ಬೋರ್ಡ್ ಹಾಕಿಸಲಾಗಿದೆ.
- **ಬಾವಿಕೈ ಶಾಲೆಯಲ್ಲಿ ವೇಸ್ಟ್ ಮ್ಯಾನೇಜ್ ಮೆಂಟ್**:- ಒಂದು ಕಾಲದಲ್ಲಿ ಖಾಲಿಗುಡ್ಡ, ಒಣಹುಲ್ಲು ಸುಟ್ಟ ಬೂದಿಯಿದ್ದ ಜಾಗ ಇಂದು ಹಸಿರು ತೋಟದಿಂದ ಕಂಗೊಳಿಸುತ್ತಿದೆ. ಶಾಲಾವರಣದಲ್ಲಿ ವೇಸ್ಟ್ ಎನಿಸಿದ ಪ್ಲಾಸ್ಟಿಕ್ ಕ್ಯಾನ್ ಗಳಿಂದ ತೋರಣ ನಿರ್ಮಿಸಿದ್ದಾರೆ. ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲಿಗಳಿಂದ ತೋರಣ ನಿರ್ಮಿಸಿದ್ದಾರೆ.
- **ಶಾಲಾ ನೀರಿನ ಸಾಕ್ಷರತೆ**:- ಕೊಡ, ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ ನೀರು ತುಂಬಿಸಿಕೊಂಡು ಅವುಗಳ ಕೆಳಗೆ ಆಸ್ಪತ್ರೆಯಲ್ಲಿ ಬಳಸಿ ಬಿಸಾಡುವ ವೇಸ್ಟ್ ಆದ ಗ್ಲೂಕೋಸ್ ಪೈಪುಗಳು, ಕ್ಯಾತೆಟರ್ ಗಳನ್ನು ಕೊಡಕ್ಕೆ ಚುಚ್ಚಿ ಗಿಡಗಳಿಗೆ ಹನಿ ನೀರಾವರಿ ಕೆಲಸ ಮಾಡಿಸಿದ್ದಾರೆ.
- **ಶಾಲಾ ಸೌಂದರ್ಯದ ಕೆಲಸಗಳು** :- ಶಾಲೆಗಾಗಿ ಊರಿನ ಎಲ್ಲರ ಸಹಕಾರ ಪಡೆಯಲು ಹಲವು ಪುಟ್ಟ ಸಮಿತಿಗಳನ್ನು ರಚಿಸಿಕೊಂಡಿದ್ದಾರೆ.

  - ಶಾಲಾ ಕಾಂಪೌಂಡ್ ಆಕರ್ಷಣಾ ಸಮಿತಿ
  - ದನ್ವಂತರಿ ವನ ನಿರ್ಮಾಣ ಸಮಿತಿ
  - ಶಾಲಾ ಕೊಳ ಮತ್ತು ಸೌಂದರ್ಯ ಸಮಿತಿ
  - ನಲಿಕಲಿ ಕೊಠಡಿ ಆಕರ್ಷಣಾ ಸಮಿತಿ
  - ಶಾಲಾ ತಂತ್ರಜ್ಞಾನ ಸಮಿತಿ
  - ಹಳೆ ವಿದ್ಯಾರ್ಥಿಗಳ ಸಂಘ

  ಹೀಗೆ ಇಲ್ಲಿ ಹಲವು ಸಮಿತಿಗಳ ಸೃಜನೆಯಾಗಿ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಮಾಡಿ ಶಾಲೆಯನ್ನು ಸುಂದರಗೊಳಿಸುವ, ಕಲಿಕಾ ಸ್ನೇಹಿ ವಾತಾವರಣ ಸೃಜಿಸುವ ಕಾರ್ಯದಲ್ಲಿ ತೊಡಗಿಸಿದ್ದಾರೆ. ಈ ಸಮಿತಿಗಳ ಕಾರ್ಯಗಳೂ ಅನನ್ಯ. ಅವುಗಳ ಕಾರ್ಯಗಳನ್ನೂ ಒಂದೊಂದೇ ಶೀರ್ಷಿಕೆಯಡಿ ಇಲ್ಲಿ ಚರ್ಚಿಸಿದೆ.

  - **ದನ್ವಂತರಿ ಕೈ ತೋಟ** :- ಶಾಲಾವರಣದಲ್ಲಿ 56ಕ್ಕೂ ಹೆಚ್ಚು ಔಷಧಿ ಸಸ್ಯಗಳನ್ನು ಬೆಳೆಸಿ ಅವುಗಳಿಗೆ ಹೆಸರಿನ ಪ್ಲೇಟ್ ಜೋಡಿಸಿ ಅವುಗಳ ಪ್ರಯೋಜನ ಮಕ್ಕಳಿಗೆ ಕಲಿಸಿದ್ದಾರೆ. ಮುಖ್ಯವಾಗಿ ವಿವಿಧ

ಹಸರು ಗಿಡಗಳ ವಾಕ್ಯಗಳು, ಆಕೃತಿಗಳ ಕಣ್ಣನಕ್ಕೆ ಸಂತೋಷ ನೀಡುತ್ತವೆ. ಎಚ್ಚರಿಕೆಯಿಂದ ಗಮನಿಸಿದರೆ ಈ ಗಿಡದ ಆಕೃತಿಗೆ ದುರಂಧರ, ಅಥವ ವಿಷಮದಾರೆಯನ್ನು ಬಳಸಿಲ್ಲ. ದೊಡ್ಡ ದೊಡ್ಡ ಪಾರ್ಕ್ ಗಳಲ್ಲಿ ತೋಟಗಾರಿಕೆ ಪದವೀಧರರು ಈ ತಪ್ಪು ಮಾಡುತ್ತಾರೆ. ಇವು ಜೀವ ವೈವಿದ್ಯತೆ ಕಾಪಾಡುವುದಿಲ್ಲವೆಂದು ಶಿಕ್ಷಕರಿಗೆ ತಿಳಿದಿದೆ. ಆದ್ದರಿಂದ ಇವರು ದುರಂಧರ, ವಿಷಮದಾರೆ ಸಸ್ಯಗಳನ್ನು ಬಳಸದೇ ಹೊನಗಾನೆ ಸೊಪ್ಪನ್ನು ಸಾಕಷ್ಟು ಸಾಕಿ ಅವುಗಳಿಂದ ಆಕೃತಿ, ಅಕ್ಷರ ಮೂಡಿಸಿದ್ದಾರೆ. ಹೊನಗಾನೆ ಸೊಪ್ಪು ಶಾಲಾ ಅಕ್ಷರ ದಾಸೋಹದ ಸಾಂಬಾರಿಗೂ ಬಳಕೆ, ಬದು ನಿರ್ಮಾಣದ ಗಿಡವಾಗಿಯೂ, ಸೌಂದರ್ಯಕ್ಕೂ ಬಳಕೆಯಾಗುತ್ತದೆ. ಬಯೋ ಡೈವರ್ಸಿಟಿಗೆ ಪೂರಕವಾದ ಕೆಲಸವನ್ನೂ ಮಾಡಿಸುತ್ತಿವೆ.

- **ಶಾಲಾ ಕಾಂಪೌಂಡ್ ಚಿತ್ತಾರ :–** ಶಾಲಾ ಕಾಂಪೌಂಡ್ ಒಳಭಾಗದಲ್ಲಿ ಶಿಕ್ಷಕರು ಮತ್ತು ಊರಿನ ಜನ ಸೇರಿ ತಮ್ಮಲ್ಲಿ ಸ್ಪರ್ಧೆ ಏರ್ಪಡಿಸಿಕೊಂಡು ಹಸೆ ಚಿತ್ತಾರಗಳಿಂದ ಚಿತ್ರ ಮೂಡಿಸಿಕೊಂಡು ಆಕರ್ಷಕವಾಗಿಸಿ ಕೊಂಡಿದ್ದಾರೆ. ಹೊರಭಾಗದಲ್ಲಿ ಮಾತ್ರ ದಾನ ಸಂಗ್ರಹಿಸಿ ವೃತ್ತಿಪರರಿಂದ ಚಿತ್ರ ಬರೆಸಲಾಗುತ್ತಿದೆ.
- ಶಾಲಾ ತಂತ್ರಜ್ಞಾನ ಸಮಿತಿಯು ಶಾಲೆಗೆ ಕಂಪ್ಯೂಟರ್, ಟಿ.ವಿ, ಡಿವಿಡಿ ಪ್ಲೇಯರ್, ಮೈಕ್ ದಾನದ ರೂಪದಲ್ಲಿ ಒದಗಿಸಿಕೊಟ್ಟಿದೆ.
- **ಶೌಚಪ್ರಜ್ಞೆ :–** ಈ ಊರು ಮತ್ತು ಗ್ರಾಮ ಪಂಚಾಯ್ತಿ ಒಬ್ಬ ಕ್ರಿಯಾ ಶೀಲ ಪಿ.ಡಿ.ಒ ಅವರಿಂದ ಸ್ವಚ್ಛತಾ ಗ್ರಾಮದ ಬಹುಮಾನ ಪಡೆದಿದೆ. ಬಯಲು ಮುಕ್ತ ಶೌಚದ ಗ್ರಾಮವಾಗಿದೆ. ಈ ಭಾರಿ ಪರಿಸರ ಅಧ್ಯಯನ ಕೇಂದ್ರ ಸಂಸ್ಥೆಯಿಂದ ಕೈಗೊಂಡ ಅಧ್ಯಯನದಲ್ಲಿ ಊರಿನ ಜನ ತೆರೆದ ತಿಪ್ಪೆಗುಂಡಿ ಮುಕ್ತ ಕಂಪೋಸ್ಟ್ ಗುಂಡಿಗಳ ಪ್ರಯತ್ನ ಗ್ರಾಮಸ್ಥರು ಮಾಡುತ್ತಿರುವುದನ್ನು ಗುರುತಿಸಿದೆ. ಇದಕ್ಕಾಗಿ ಈ ಭಾರಿ ಗ್ರಾಮಸ್ಥರಿಗೆ ಪ್ರಶಸ್ತಿಯನ್ನೂ ನೀಡಲಾಗಿದೆ. ಶಾಲೆಯಿಂದ ಸಮುದಾಯದ ಕಡೆ ಈ ಕೆಲಸವಾಗುತ್ತಿರುವುದೂ ಸಂಸ್ಕಾರದ ಪ್ರಸರಣದ ಉತ್ತಮ ಕಾರ್ಯ. ಗ್ರಾಮ ಪಂಚಾಯ್ತಿ ಪಿ.ಡಿ.ಒ ಅವರು ಅತೀ ಕಡಿಮೆ ಬೆಲೆಯ ಆಸ್ಬೆಟೋಸ್ ಶೀಟಿನ ಶೌಚಾಲಯ ನಿರ್ಮಿಸಿದ್ದು ಇದನ್ನು ಪ್ರದರ್ಶಿಸಲು ಶಾಲಾವರಣವನ್ನೇ ಆಯ್ಕೆ ಮಾಡಿಕೊಂಡಿರುತ್ತಾರೆ.

ಶಿಕ್ಷಕರು ಹಲವು ಕನಸುಗಳನ್ನು ಹೊತ್ತು, ಬಡ ಪೋಷಕರಿರುವ ಹೃದಯ ಶ್ರೀಮಂತರ ಗ್ರಾಮದಲ್ಲಿ ಕೆಲಸಮಾಡುತ್ತಿದ್ದಾರೆ. ಗ್ರಾಮಸ್ಥರು ಇವರನ್ನು ನಮ್ಮ ಕಣ್ಣು ಎಂದು ಗುರುತಿಸುತ್ತಾರೆ. ಪ್ರಸ್ತುತ ಕರ್ಸಿವ್ ಹ್ಯಾಂಡ್ ರೈಟಿಂಗ್ ಮಕ್ಕಳಲ್ಲಿ ಕಲಿಸುತ್ತಿದ್ದು ಶಾಲಾ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದೆ.

1) **ಆಂಗ್ಲ ಕುಟೀರ:–** ಅಡಿಕೆ, ಸೋಗೆ, ಇತ್ಯಾದಿ ಮರಗಳಿಂದ ಊರಿನ ಜನರ ಸಹಕಾರದೊಂದಿಗೆ ಸುಂದರ ಕುಟೀರ ನಿರ್ಮಿಸಿ ಅದರಲ್ಲಿ ಇಟಿರಟ್ಟು ಕುಟೀರವಾಗಿ ಪರಿವರ್ತಿಸಲಾಗಿದೆ. ಪರಿಸರಕ್ಕೆ ಸಂಬಂಧಿಸಿದ ಸುಭಾಷಿತ ಫಲಕ ಬರೆದು ತೂಗು ಹಾಕಲಾಗಿದೆ.
2) **English ಕಲಿಕೆಗೆ ವಿಶೇಷ ಪರಿಶ್ರಮ:–** 1ನೇ ತರಗತಿಯಿಂದಲೇ Cursive handwriting, ಅಭ್ಯಾಸ ಶಾಲೆಯ ಎಲ್ಲಾ ಕಾರ್ಯಕ್ರಮಗಳನ್ನು ಇಟಿರಟ್ಟು ನಲ್ಲೆ ಮಕ್ಕಳು ನಿರೂಪಣೆ ಮಾಡುವುದು.
3) **ಕಸದಿಂದ ರಸ :–** ಬಾಟಲಿಗಳಿಂದ ಶೃಂಗಾರ, ಗಿಡ ಬೆಳೆಸಿರುವುದು ಹೆಸರು, ಗ್ರಹಗಳ ಹೆಸರು, ನಲಿ–ಕಲಿ ಅಕ್ಷರ ಬರೆದಿರುವುದು ಡಬ್ಬ ಕೊಯ್ದ ಮುಚ್ಚಳಗಳಲ್ಲೂ ತಾಲೂಕುಗಳ, ನದಿಗಳ ಹೆಸರು ಬರೆದಿರುವುದು.

4) ಧನ್ವಂತರಿ ಔಷಧಿವನ:– 'ಧನ್ವಂತರಿ' ಹೆಸರಿನ ಔಷಧಿವನ ಇದ್ದು ಸುಮಾರು 60 ಜಾತಿ ಗಿಡಗಳಿದ್ದು ಮಕ್ಕಳಿಗೆ ಅವುಗಳ ಹೆಸರು. ವೈಜ್ಞಾನಿಕ ಹೆಸರು, ಉಪಯೋಗಗಳ ಬಗ್ಗೆ ಕಲಿಸಲಾಗಿದೆ. ಪ್ರತಿ ಬುಧವಾರ ಬಿಸಿಯೂಟಕ್ಕೆ ಔಷಧಿ ಗಿಡಗಳಿಂದ ಬೋಂಡಾ, ಚಟ್ನಿಪುಡಿ, ತಂಬೂಳಿ ಮಾಡಿ ಬಡಿಸಲಾಗುತ್ತಿದೆ,

5) ಹಸೆ ಚಿತ್ತಾರ :– ಕಾಂಪೌಂಡ್‌ಗಳ ಮೇಲೆ, ಶಾಲೆಯ ಗೋಡೆಗಳ ಮೇಲೆ ಹಳೆ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸಿ ಬಿಡಿಸಿದ ಹಸೆ ಚಿತ್ತಾರ, ವಿವಿಧ ಇಲಾಖೆಗಳ ಸೌಲಭ್ಯಗಳ ನಾಮಫಲಕ ಬರೆಸಲಾಗಿದೆ.

6) ಸೈಕಲ್ ತುಳಿದರೆ ಉದ್ಯಾನವನಕ್ಕೆ ನೀರು, ಬಿಸಿನೀರಿನ ಸೋಲಾರ್ ವ್ಯವಸ್ಥೆಯ ಡಿಶ್ ಬುಟ್ಟಿ, ಬೆಳಕಿನ ಹೆಂಚುಗಳು.

7) ವಿವಿಧ ಉಪಸಮಿತಿಗಳು:– SDMC ಸದಸ್ಯರುಗಳಿಗೆ ವಿವಿಧ ಉಪ ಸಮಿತಿ ಮಾಡಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಜವಾಬ್ದಾರಿ ನೀಡಲಾಗಿದೆ.

1) ಧನ್ವಂತರಿ 2)ತಂತ್ರಜ್ಞಾನ 3)ಕಾಂಪೌಂಡ್ ಆಕರ್ಷಣ ಸಮಿತಿ 4)ನಲಿ–ಕಲಿ ಕೊಠಡಿ ಸಮಿತಿ ets.

8) ಮಕ್ಕಳಿಗೆ ವಿಶೇಷ ಸಮವಸ್ತ್ರ :– ಮಕ್ಕಳಿಗೆ ಬ್ಲೇಸರ್, ಆಕರ್ಷಕ T logo, shirt pant ಒಳಗೊಂಡ ವಿಶೇಷ ಸಮವಸ್ತ್ರ ವ್ಯವಸ್ಥೆ ಇದೆ.

9) ಗೋ ಲೋಕ :– ದನದ ಮಾದರಿ ಇದ್ದು ಗೋವಿನ ಲೋಕ ಸೃಷ್ಟಿಸಲಾಗಿದ?

10) ನವಿಲು, ಕೊಕ್ಕರೆಗಳು:– ನವಿಲು, ಕೊಕ್ಕರೆ ಮಾದರಿಗಳು ಶಾಲೆಯ ಆಕರ್ಷಣೆಯಾಗಿವೆ.

11) ಮಾದರಿ ಶೌಚಾಲಯ:– ಶೌಚಾಲಯ ಬಳಕೆ ಮಹತ್ವ ಸಾರುವ ಮಾದರಿ ಶೌಚಾಲಯ ಇದ್ದು ಅದರ ಮೂಲಕ ಗ್ರಾಮ ಜಾಗೃತಿ ಜಾಥಾ ಮಾಡಲಾಗುತ್ತದೆ.

12) ಬಿಸಿಯೂಟಕ್ಕೆ ತರಕಾರಿ:– ಬಿಸಿಯೂಟಕ್ಕೆ ಸಾಕಷ್ಟು ತರಕಾರಿ. ಸೊಪ್ಪು ಬೆಳೆಯಲಾಗುತ್ತದೆ.

13) ಎಲ್ಲಾ ಮಕ್ಕಳಿಗೂ ದಿನಪತ್ರಿಕೆ ಕೊಡುಗೆ:– ಪ್ರತಿ ನಿತ್ಯ ಎಲ್ಲಾ ಮಕ್ಕಳ ಮನೆಗಳಿಗೂ V.K ಮಿನಿ ಎಂಬ ದಿನ ಪತ್ರಿಕೆ ಅವರವರ ಮನೆಗೆ ದಾನಿಗಳ ನೆರವಿನಿಂದ ನೀಡಲಾಗುತ್ತಿದೆ.

14) ಶಾಲೆಗೆ ಬನ್ನಿ ಶನಿವಾರ, ಕಲಿಯಲು ನೀಡಿ ಸಹಕಾರ:– ಈ ಕಾರ್ಯಕ್ರಮದಲ್ಲಿ ಪ್ರತಿತಿಂಗಳಲ್ಲಿ ಒಂದು ಶನಿವಾರ ವಿಶೇಷ ವ್ಯಕ್ತಿಗಳನ್ನು ಕರಸಿ ಮಕ್ಕಳಿಗೆ ಬೋಧನೆ ಮಾಡಲಾಗುತ್ತಿದೆ.

15) ಮಕ್ಕಳ ಬ್ಯಾಂಕ್ :– 'ಶರಾವತಿ ಸಹಕಾರ ಸಂಘ' ಎಂಬ ಮಕ್ಕಳ ಬ್ಯಾಂಕ್ ಇದೆ.

16) Dancing star award-2019:– ನಮ್ಮ ಶಾಲಾ ಮಕ್ಕಳು ಹೊಸನಗರದಲ್ಲಿ ನೆಡೆದ ತಾಲೂಕು ಮಟ್ಟದ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿದ ಕಾರ್ಯಕ್ರಮದಲ್ಲಿ ವಿಜೇತರಾಗಿ ಗೆದ್ದ 6500/– ರೂ ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಹಾಗೂ ಶಾಲೆಯ ಯಶೋಗಾಥೆ ಹೇಳುವ ಫೋಟೋ ಆಲ್ಬಂ ಕೊಡುಗೆ ನೀಡಿರುತ್ತಾರೆ.

17) ಸುಂದರವಾದ ಉದ್ಯಾನವನ :– ಹೊನಗೊನೆ ಸೊಪ್ಪಿನಿಂದ ಮಣ್ಣಿನ ನೆಲದ ಮೇಲೆ ಅರಳಿದ ನಲಿ–ಕಲಿ, ಘಇಐ–ಅಔಒಇ, ಧನ್ವಂತರಿ ನೋಡಲು ಆಕರ್ಷಕವಾಗಿದ್ದು ಉದ್ಯಾನವನವು ತುಂಬಾ ಆಕರ್ಷಕವಾಗಿದೆ.

ಪರಿಸರ ಮಿತ್ರ ಶಾಲೆ:– ಪರಿಸರ ಅಧ್ಯಯನ ಕೇಂದ್ರ ನಮಗೆ ಸ್ಫೂರ್ತಿ ನೀಡಿದ್ದು ನಮ್ಮ ಶಾಲೆಯು 2017–18 ನೇ ಸಾಲಿನ ಹಸಿರುಶಾಲೆ ಸ್ವಚ್ಛಗ್ರಾಮ, ಸ್ವಚ್ಛಶಾಲೆ– ಪ್ರಶಸ್ತಿ 2018–19 ನೇ ಸಾಲಿನಲ್ಲಿ ಧನ್ವಂತರಿ ಪ್ರಶಸ್ತ, ಹಸಿರು ಶಾಲೆ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೇ ಈ ಶಾಲೆಯ ಸಹ ಶಿಕ್ಷಕರಾದ ಶ್ರೀ ನಾಗರಾಜ.ಗಿ.ಆ ಇವರಿಗೆ 2018–19 ನೇ ಸಾಲಿನ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.

ಮುಂದಿನ ಗುರಿಗಳು:–

1. ಪರಿಸರಮಿತ್ರ ಶಾಲಾ ಪ್ರಶಸ್ತಿಗೆ ಸಿದ್ಧತೆ ಮಾಡಿಕೊಳ್ಳುವುದು.
2. ಕಂಪ್ಯೂಟರ್ ಶಿಕ್ಷಣಕ್ಕೆ ಒತ್ತು ನೀಡುವುದು.
3. ಆಕರ್ಷಕ ನಲಿ–ಕಲಿ ಕೊಠಡಿ ಹಾಗೂ ವ್ಯವಸ್ಥೆ ಮಾಡಿಕೊಳ್ಳುವುದು.
4. ಶಾಲಾ ವಾತಾವರಣ ಇನ್ನೂ ಆಕರ್ಷಿಯ ಗೊಳಿಸುವುದು.
5. ಗುಣಾತ್ಮಕ ಕಲಿಕೆಗೆ ವಿಶೇಷ ಶ್ರಮ ಹಾಕುವುದು.

ನಮ್ಮ ಶಾಲೆಗೆ ಭೇಟಿ ನೀಡಿ ನಮ್ಮ ಸಾಧನೆ ಗುರುತಿಸಿದ DIET ನ ಉಪನ್ಯಾಸಕ ವೃಂದಕ್ಕೂ, ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳವರಿಗೂ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ, ಸಮನ್ವಯಾಧಿಕಾರಿಗಳಿಗೂ, ಅಖಿಕ ಹಾಗೂ ಸಂಘ ಸಂಸ್ಥೆಗಳಿಗೂ, ಪರಿಸರ ಅಧ್ಯಯನ ಕೇಂದ್ರಕ್ಕೂ ಆಭಾರಿಯಾಗಿದ್ದೇವೆ.















